**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾದಂ.,ರವರ ನ್ಯಾಯಾಲಯಃ**
**ದೊಡ್ಡಬಳ್ಳಾಪುರ**

**ತೀರ್ಪಿನ ದಿನಾಂಕಃ 23 ನೇ ಜೂನ್ -2026**

**ಉಪಸ್ಥಿತರು**

**ಶ್ರೀ ದಾಸರಿ ಕ್ರಾಂತಿ ಕಿರಣ್., ಬಿ.ಕಾಂ.,ಎಲ್.ಎಲ್.ಬಿ.,**
ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು
ದೊಡ್ಡಬಳ್ಳಾಪುರ..

**ಸಿ.ಸಿ.ಸಂಖ್ಯೆಃ 754/2017**

| | |
|---|---|
| **ಫಿರ್ಯಾದಿ** | ಸರ್ಕಾರದ ಪರವಾಗಿ ಹೊಸಹಳ್ಳಿ ಪೊಲೀಸರು (ಸಹಾಯಕ ಸರ್ಕಾರಿ ಅಭಿಯೋಜಕರು) |
| **- ವಿರುದ್ಧ -** | |
| **ಆರೋಪಿ** | ನರಸಿಹರಾಜು<br>ಬಿನ್ ಮುತ್ತಪ್ಪ<br>29 ವರ್ಷ<br>ವಾಸ ಕೊಟ್ಟಿಗೆಮಾಚೇನಹಳ್ಳಿ ಗ್ರಾಮ,<br>ಸಾಸಲು ಹೋಬಳಿ,<br>ದೊಡ್ಡಬಳ್ಳಾಪುರ ತಾಲ್ಲೂಕು |
| **ಪ್ರಕರಣದ ದಿನಾಂಕ** | 04-10-2016 |
| **ಪ್ರಕರಣದ ವರದಿಯ ದಿನಾಂಕ** | - |
| **ಫಿರ್ಯಾದಿಯ ಹೆಸರು** | - |
| ಸಾಕ್ಷ್ಯ ದಾಖಲೆ ಪ್ರಾರಂಭವಾದ ದಿನಾಂಕ | 04-01-2023 |
| **ಸಾಕ್ಷ್ಯ ದಾಖಲೆ ಮುಕ್ತಾಯವಾದ ದಿನಾಂಕ** | 04-01-2023 |
| **ದೂರು ನೀಡಿರುವ ಅಪರಾಧ** | ಭಾ.ದಂ.ಸಂ. ಕಲಂ.354(ಬಿ) ಮತ್ತು 506 ರ |
| **ನ್ಯಾಯಾಧೀಶರ ಅಭಿಪ್ರಾಯ** | ಭಾ.ದಂ.ಸಂ. ಕಲಂ.354(ಬಿ) ಮತ್ತು 506 ರ ರೀತ್ಯಾ ದಂಡನೀಯವಾದ ಅಪರಾಧ |

| | |
|---|---|
| | ಆರೋಪಿಯನ್ನು ದೋಷ ಮುಕ್ತಗೊಳಿಸಿ ನಿರ್ದೋಷಿಯೆಂದು ಆದೇಶಿಸಲಾಗಿದೆ. |
| **ಫಿರ್ಯಾದಿಯ ಪರವಾಗಿ** | ಸ.ಸ.ಅ. |
| **ಆರೋಪಿಯ ಪರವಾಗಿ** | ಶ್ರೀ. ಆರ್.ಎಮ್, ವಕೀಲರು |

*****

**ತೀರ್ಪು**

ಹೊಸಹಳ್ಳಿ ಪೊಲೀಸ್ ಠಾಣೆಯ ಪೊಲೀಸರು ಆರೋಪಿಯ ವಿರುದ್ಧ ಭಾರತೀಯ ದಂಡ ಸಂಹಿತೆ ಕಲಂ.ಭಾ.ದಂ.ಸಂ. ಕಲಂ.354(ಬಿ) ಮತ್ತು 506 ರ ರೀತ್ಯಾ ದಂಡನೀಯವಾದ ಅಪರಾಧಗಳಿಗಾಗಿ ದೋಷಾರೋಪಣಾ ಪಟ್ಟಿ ಸಲ್ಲಿಸಿದ್ದಾರೆ.

**2.** **ಅಭಿಯೋಜನೆಯ ಪ್ರಕರಣದ ಸಾರಾಂಶ ಕೆಳಗಿನಂತೆ ಇದೆ:**

ದಿನಾಂಕ:4/10/2016 ರಂದು ಮಧ್ಯಾಹ್ನ 2-00 ಗಂಟೆ ಸಮಯದಲ್ಲಿ ಘನ ನ್ಯಾಯಾಲಯದ ವ್ಯಾಪ್ತಿ ಹೊಸಹಳ್ಳಿ ಪೊಲೀಸ್ ಠಾಣೆ ಸರಹದ್ದು ಕೊಟ್ಟಿಗೇಮಾಚೇನಹಳ್ಳಿ ಗ್ರಾಮದ ವಾಸಿ ಮೂರ್ತಿ ಬಿನ್ ಲಕ್ಷ್ಮೀನರಸಪ್ಪ ರವರ ರಾಗಿ ಹೊಲದ ಬಳಿ ಚಾಸಾ-1 ರವರು ಬಹಿರ್ದೆಸೆಗೆ ಹೋಗಿ ವಾಪಸ್ ಬರುತ್ತಿದ್ದಾಗ ಆರೋಪಿ ಚಾಸಾ-1 ರವರನ್ನು ಬಿಗಿಯಾಗಿ ತಬ್ಬಿಕೊಂಡು ಬಾಯಿಗೆ ಬಟ್ಟೆ ತುರುಕಿ, ಚಾಕು ತೋರಿಸಿ ಹೆದರಿಸಿ ಬಲಾತ್ಕರ ದಿಂದ ಅತ್ಯಾಚಾರ ಮಾಡಲು ಪ್ರಯತ್ನಿಸಿರುವ ಕಾರಣ ಭಾರತೀಯ ದಂಡ ಸಂಹಿತೆ ವಿಧಿ.354(ಬಿ) ಮತ್ತು 504 ರ ರೀತ್ಯಾ ದಂಡನೀಯವಾದ ಅಪರಾಧಗಳಿಗಾಗಿ ದೋಷಾರೋಪಣಾ ಪಟ್ಟಿ ಸಲ್ಲಿಸಿದ್ದಾರೆ.

3. ಆರೋಪಿಯು ನ್ಯಾಯಾಲಯದಿಂದ ಜಾಮೀನು ಪಡೆದುಕೊಂಡಿರುತ್ತಾರೆ. ಅಭಿಯೋಜನೆಯ ಕಡತದ ಪ್ರತಿಗಳನ್ನು ಆರೋಪಿಗೆ ಒದಗಿಸಿ ಉಭಯ ಪಕ್ಷಕಾರರ ವಾದವನ್ನು ಆಲಿಸಿ ದೋಷಾರೋಪಣೆಯನ್ನು ರೂಪಿಸಲಾಯಿತು. ಆರೋಪಿಯು ತಾವು ತಪ್ಪು ಮಾಡಿಲ್ಲ ವಿಚಾರಣೆಯಾಗಲಿ ಎಂದು ಮನವಿ ಮಾಡಿದ ಕಾರಣ ಪ್ರಕರಣದ ವಿಚಾರಣೆ ನಡೆಸಲಾಯಿತು.

4. ಅಭಿಯೋಜನೆಯು ತನ್ನ ಆರೋಪಣೆಗಳನ್ನು ರುಜುವಾತು ಪಡಿಸುವ ಸಲುವಾಗಿ ಫಿರ್ಯಾದಿ ಚಾಸಾ.1 ಉಮಾದೇವಿ ರವರನ್ನು ಪ್ರಾಸಾ.1 ಎಂದು ವಿಚಾರಣೆಗೊಳಪಡಿಸಿ ದೂರನ್ನು ನಿ.ಪಿ.1 ಮತ್ತು ಅದರಲ್ಲಿರುವ ತನ್ನ ಸಹಿಯನ್ನು ನಿ.ಪಿ.1(ಎ) ಎಂದು ಮತ್ತು ಪ್ರಾಸಾ-1 ರವರು ಮತ್ತೊಂದು ದಾಖಲೆಯನ್ನು ಗುರುತಿಸಿದ್ದು ಅದು ಜಪ್ತಿಪಂಚನಾಮೆ ಆಗಿದ್ದು ಅದನ್ನು ನಿಪಿ.2 ಎಂದು ಮತ್ತು ಅದರಲ್ಲಿರುವ ತನ್ನ ಸಹಿಯನ್ನು ನಿ.ಪಿ.2(ಎ) ಎಂದು ಮತ್ತು ಆ ದಿನ ವಶಪಡಿಸಿಕೊಂಡ ಚಾಕುವನ್ನು ಸಾಕ್ಷಿ ನ್ಯಾಯಾಲಯದ ಮುಂದೆ ನೋಡಿ ಗುರುತಿಸಿದ್ದು ಅದನ್ನು ಮು. ಮಾ.1 ಎಂದು ಗುರುತಿಸಿಕೊಂಡಿರುತ್ತಾರೆ ಹಾಗೂ ಉಳಿದ ಸಾಕ್ಷಿದಾರರಿಗೆ ಸಮನ್ಸ್ ಕಳಿಸುವಂತೆ ಅಭಿಯೋಜಕರ ಪ್ರಾರ್ಥನೆಯನ್ನು ತಿರಸ್ಕರಿಸಲಾಯಿತು, ಕಾರಣ ಉಳಿದ ಸಾಕ್ಷಿಗಳನ್ನು ವಿಚಾರಣೆಗೆ ಒಳಪಡಿಸಿದರೂ ಕೂಡ ಅಭಿಯೋಜನೆಯ ಉದ್ದೇಶ ಪೂರ್ಣವಾಗುವುದಿಲ್ಲವೆಂದು ಅರಿತು ಅಭಿಯೋಜನೆಯ ಸಾಕ್ಷ್ಯವನ್ನು ಮುಕ್ತಾಯಗೊಳಿಸಲಾಯಿತು. ಅಭಿಯೋಜನೆಯ ಸಾಕ್ಷಿ ವಿಚಾರಣೆಯಲ್ಲಿ ಆರೋಪಿತರುಗಳ ವಿರುದ್ದ ಸಾಕ್ಷ್ಯಾಧಾರಗಳು ಕಂಡು ಬಾರದೇ ಇರುವುದರಿಂದ, ದಂ.ಪ್ರ.ಸಂ. ಕಲಂ 313 ರ

ಅಡಿಯಲ್ಲಿ ದಾಖಲು ಮಾಡುವಂತಹ ಆರೋಪಿಗಳ ಹೇಳಿಕೆಯನ್ನು ಕೈಬಿಡಲಾಯಿತು.

5. ಪ್ರಕರಣದ ವಿಚಾರಣೆಯ ತರುವಾಯ ಉಭಯ ಪಕ್ಷಕಾರರ ವಾದವನ್ನು ಆಲಿಸಿ ಕಡತವನ್ನು ಕೂಲಂಕುಷವಾಗಿ ಪರಿಶೀಲಿಸಿದ್ದೇನೆ. ನನ್ನ ನಿರ್ಣಯಕ್ಕೆ ಕೆಳಕಂಡ ಅಂಶಗಳು ಉದ್ಭವಿಸುತ್ತವೆ.

**ಅಂಶ.1:** ದಿನಾಂಕ 04-10-2016 ರಂದು ಮಧ್ಯಾಹ್ನ 02-00 ಗಂಟೆ ಸಮಯದಲ್ಲಿ ಹೊಸಹಳ್ಳಿ ಪೊಲೀಸ್ ಠಾಣಾ ಸರಹದ್ದು ಕೊಟ್ಟಿಗೇಮಾಚೇನಹಳ್ಳಿ ಗ್ರಾಮದಲ್ಲಿರುವ ಚಾಸ-1 ರವರು ರಾಗಿ ಹೊಲದ ಬಳಿ ಬಹಿರ್ದೆಸೆಗೆ ಹೋಗಿ ವಾಪಸು ಬರುತ್ತಿದ್ದಾಗ ಆರೋಪಿಯಾದ ನೀವು ಚಾಸ-1 ರವರನ್ನು ಬಿಗಿಯಾಗಿ ತಬ್ಬಿಕೊಂಡು, ಅವರ ಬಾಯಿಗೆ ಬಟ್ಟೆ ತುರುಕಿ, ಚಾಕು ತೋರಿಸಿ ಹೆದರಿಸಿ ಬಲಾತ್ಕರದಿಂದ ಅತ್ಯಾಚಾರ ಮಾಡಲು ಪ್ರಯತ್ನಿಸಿದ ಕಾರಣ ಭಾರತೀಯ ದಂಡ ಸಂಹಿತೆ ಕಲಂಃ 354(ಬಿ) ನೇದರಡಿ ಶಿಕ್ಷಾರ್ಹ ಅಪರಾಧವನ್ನು ಎಸಗಿರುತ್ತಾರೆಂದು ಅಭಿಯೋಜನೆಯು ಯಾವುದೇ ಸಹಜ ಸಂಶಯಗಳಿಗೆ ಎಡೆ ಇಲ್ಲದಂತೆ ರುಜುವಾತು ಪಡಿಸಿದೆಯೇ?

**ಅಂಶ.2**: ಮೇಲೆ ಹೇಳಿದ ದಿನಾಂಕ, ಸ್ಥಳ ಹಾಗೂ ಸಮಯದಲ್ಲಿ ಅರೋಪಿಯಾದ ನೀವು ಚಾಸಾ-1 ರವರನ್ನು ಬಲಾತ್ಕಾರದಿಂದ ಅತ್ಯಾಚಾರ ಮಾಡುವ ಕಾರಣದಿಂದ ಅವರಿಗೆ ಚಾಕು ತೋರಿಸಿ ಹೆದರಿಸಿ ಪ್ರಾಣ ಬೆದರಿಕೆ ಹಾಕಿದ ಕಾರಣ ಭಾರತೀಯ ದಂಡ ಸಂಹಿತೆ ಕಲಂಃ 506 ನೇದರಡಿ ಶಿಕ್ಷಾರ್ಹ ಅಪರಾಧವನ್ನು ಎಸಗಿರುತ್ತಾರೆಂದು ಅಭಿಯೋಜನೆಯು ಯಾವುದೇ ಸಹಜ ಸಂಶಯಗಳಿಗೆ ಎಡೆ ಇಲ್ಲದಂತೆ ರುಜುವಾತು ಪಡಿಸಿದೆಯೇ?

**<u>ಅಂಶ.3:</u>** ಯಾವ ಆದೇಶ?

6. ಮೇಲ್ಕಂಡ ಅಂಶಗಳಿಗೆ ನನ್ನ ನಿರ್ಣಯಗಳು ಕೆಳಗಿನಂತೆ ಇವೆ:

| | | |
|---|---|---|
| ಅಂಶ.1 ಮತ್ತು 2 | : | ನಕಾರಾತ್ಮಕ |
| ಅಂಶ.3 | : | ಅಂತಿಮ ಆದೇಶದಂತೆ ಕೆಳಕಂಡ ಕಾರಣಗಳಿಗಾಗಿ |

**<u>ಕಾರಣಗಳು</u>**

**7. <u>ಅಂಶ.1 ಮತ್ತು 2:</u>** ಈ ಎಲ್ಲಾ ಅಂಶಗಳು ಏಕ ಘಟನೆಯಿಂದ ಉದ್ಭವಿಸಿರುವ ಕಾರಣ ಇವುಗಳನ್ನು ಒಟ್ಟಾಗಿಯೇ ಚರ್ಚೆಗೆ ತೆಗೆದುಕೊಳ್ಳಲಾಗಿದೆ.

8.ದೊಡ್ಡಬಳ್ಳಾಪುರ ಗ್ರಾಮಾಂತರ ಪೊಲೀಸ್ ದಿನಾಂಕ:4/10/2016 ರಂದು ಮಧ್ಯಾಹ್ನ 2-00 ಗಂಟೆ ಸಮಯದಲ್ಲಿ ಘನ ನ್ಯಾಯಾಲಯದ ವ್ಯಾಪ್ತಿ ಹೊಸಹಳ್ಳಿ ಪೊಲೀಸ್ ಠಾಣೆ ಸರಹದ್ದು ಕೊಟ್ಟಿಗೇಮಾಚೇನಹಳ್ಳಿ ಗ್ರಾಮದ ವಾಸಿ ಮೂರ್ತಿ ಬಿನ್ ಲಕ್ಷ್ಮೀನರಸಪ್ಪ ರವರ ರಾಗಿ ಹೊಲದ ಬಳಿ ಚಾಸಾ-1 ರವರು ಬಹಿರ್ದೆಸೆಗೆ ಹೋಗಿ ವಾಪಸ್ ಬರುತ್ತಿದ್ದಾಗ ಆರೋಪಿ ಚಾಸಾ-1 ರವರನ್ನು ಬಿಗಿಯಾಗಿ ತಬ್ಬಿಕೊಂಡು ಬಾಯಿಗೆ ಬಟ್ಟೆ ತುರುಕಿ, ಚಾಕು ತೋರಿಸಿ ಹೆದರಿಸಿ ಬಲಾತ್ಕರ ದಿಂದ ಅತ್ಯಾಚಾರ ಮಾಡಲು ಪ್ರಯತ್ನಿಸಿರುವ ಕಾರಣ ಭಾರತೀಯ ದಂಡ ಸಂಹಿತೆ ವಿಧಿ.354(ಬಿ) ಮತ್ತು 504 ರ ರೀತ್ಯಾ ದಂಡನೀಯವಾದ ಅಪರಾಧಗಳನ್ನು ಎಸಗಿರುತ್ತಾರೆ ಎಂದು ಆಪಾದಿಸಲಾಗಿರುತ್ತದೆ.

9. ಅಭಿಯೋಜನೆಯ ಪ್ರಕರಣವನ್ನು ಪುರಾವೆಗೊಳಿಸಲು ಪ್ರಕರಣದ ಫಿರ್ಯಾದಿ ಸಾಕ್ಷಿದಾರರಾದ ಚಾಸಾ-1 ಉಮಾದೇವಿ ರವರನ್ನು ಪ್ರಾಸಾ.1 ಎಂದು ವಿಚಾರಣೆಗೆ ಒಳಪಡಿಸಿದಾಗ, ವಾಸ-2 ರಿಂದ 4 ರವರು ನನಗೆ ಗೊತ್ತು, ಆರೋಪಿ ನನಗೆ ಗೊತ್ತು, ದಿನಾಂಕ 04.10.2016 ರಂದು ಮಧ್ಯಾಹ್ನ 2-00 ಗಂಟೆ ಸುಮಾರಿಗೆ ನಾನು ಬಹಿರ್ದೆಸಗೆ ಹೋಗಿ ಬರುತ್ತಿದ್ದಾಗ ನರಸೇಗೌಡರವರ ರಾಗಿ ಹೊಲದ ಬಳಿ ಆರೋಪಿ ಹಿಂದಿನಿಂದ ಬಂದು ನನ್ನ 2 ಕೈಗಳನ್ನು ಬಿಗಿಯಾಗಿ ಹಿಡಿದುಕೊಂಡು ಬಾಯಿಗೆ ಬಟ್ಟೆಯನ್ನು ತುರಿಕಿ ಚಾಕುವನ್ನು ತೋರಿಸಿ ಅತ್ಯಚಾರ ಮಾಡಲು ಪ್ರಯತ್ನ ಮಾಡಿದನು, ನನ್ನ ಅತ್ತೆ ಚಾಸಾ-2 ರವರು ನನ್ನನ್ನು ಹುಡುಕಿಕೊಂಡು ಮುಂದೆ ಬರುತ್ತಿದ್ದಾಗ ಆರೋಪಿ ನನ್ನ ಅತ್ತೆಯನ್ನು ನೋಡಿ ಕೈಯಲ್ಲಿದ್ದ ಚಾಕುವನ್ನು ಬಿಸಾಕಿ ಓಡಿ ಹೋದನು, ನಂತರ ನಾನು ಪೋಲಿಸ್ ಠಾಣೆಗೆ ಹೋಗಿ ದೂರು ಕೊಟ್ಟಿದ್ದೇನೆ, ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಿ ಕೇಳಲಾಗಿ ಅದರಲ್ಲಿರುವ ಸಹಿಯನ್ನು ನೋಡಿ ಗುರುತಿಸಿದ್ದು, ಅದು ಲಿಖಿತ ದೂರು ಆಗಿದ್ದು, ಅದನ್ನು ನಿಪಿ-1 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು. ಮರು ದಿನ ಪೋಲಿಸರು ಸ್ಥಳಕ್ಕೆ ಬಂದು ಪಂಚನಾಮೆ ಮಾಡಿ ಒಂದು ಚಾಕುವನ್ನು ಜಪ್ತಿ ಮಾಡಿಕೊಂಡಿದ್ದಾರೆ, ಆ ಸಮಯದಲ್ಲಿ ಚಾಸಾ-3 ಮತ್ತು 4 ರವರು ಇದ್ದರು, ಸಾಕ್ಷಿಗೆ ಮತ್ತೊಂದು ದಾಖಲೆಯನ್ನು ತೋರಿಸಿ ಕೇಳಲಾಗಿ ಅದಲ್ಲಿರುವ ಸಹಿಯನ್ನು ನೋಡಿ ಗುರುತಿಸಿದ್ದು, ಸದರಿ ದಾಖಲೆ ಸ್ಥಳ ಮತ್ತು ಜಪ್ತಿ ಪಂಚನಾಮೆ ಆಗಿದ್ದು, ಅದನ್ನು ನಿಪಿ-2 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು, ಆ ದಿನ ವಶಪಡಿಸಿಕೊಂಡ ಚಾಕುವನ್ನು ಸಾಕ್ಷಿ ನ್ಯಾಯಾಲಯದ ಮುಂದೆ ನೋಡಿ ಗುರುತಿಸಿದ್ದು, ಅದನ್ನು ಮು.ಮಾ.1 ಎಂದು

ಗುರುತಿಸಲಾಯಿತು, ನಂತರ ನಾನು ನ್ಯಾಯಾಲಯದ ಮುಂದೆ ಹಾಜರಾಗಿ ಹೇಳಿಕೆ ನೀಡಿದ್ದೇನೆ, ಸಾಕ್ಷಿ ತಾವು ನೀಡಿದ ದಂಡ ಪಕ್ರಿಯೆ ಸಂಹಿತೆ ಕಲಂ.164 ಹೇಳಿಕೆಯನ್ನು ನಿಪಿ.3 ಎಂದು ಗುರುತಿಸಲಾಯಿತು, ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ, ಆರೋಪಿ ಗೈರು ಹಾಜರಿದ್ದು , ಆತನನ್ನು ಗುರುತಿಸುವುದಕ್ಕೆ ಸಂಬಂಧಿಸಿದಂತೆ ಯಾವುದೇ ತಕರಾರು ಇಲ್ಲ ಎಂದು ಆರೋಪಿ ಪರ ವಕೀಲರು ತಿಳಿಸಿದ್ದಾರೆ ಎಂದು ಪ್ರಾಸಾ-1 ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ ತಮ್ಮ ಸಾಕ್ಷ್ಯವನ್ನು ನುಡಿದಿರುತ್ತಾರೆ. ಸರ್ಕಾರಿ ಅಭಿಯೋಜಕರು ಪ್ರಾಸಾ.1 ರವರನ್ನು ಪಾಟೀ ಸವಾಲಿಗೆ ಒಳಪಡಿಸಿದಾಗ, ಆರೋಪಿಯು ನನ್ನನ್ನು ಎಂದಿಗೂ ಸಹ ಹಿಂದಿನಿಂದ ಬಂದು ನನ್ನ ಎರಡು ಕೈ ಗಳನ್ನು ಬಿಗಿಯಾಗಿ ಹಿಡಿದುಕೊಂಡು ಬಾಯಿಗೆ ಬಟ್ಟೆಯನ್ನು ತುರುಕಿಸಿರುವುದಿಲ್ಲ, ನನ್ನನ್ನು ಎಂದಿಗೂ ಅತ್ಯಾಚಾರ ಮಾಡಲು ಪ್ರಯತ್ನ ಮಾಡಿರುವುದಿಲ್ಲ, ನಾನು ಯಾವುದೇ ದೂರನ್ನು ನೀಡಿರುವುದಿಲ್ಲ, ಪೋಲಿಸರು ನನ್ನ ಸಮಕ್ಷಮ ಯಾವುದೇ ಮಹಜರ್ ಮಾಡಿರುವುದಿಲ್ಲ, ನ್ಯಾಯಾಲಯದ ಮುಂದೆ ಪೋಲಿಸರು ಈ ಹಿಂದೆ ನನ್ನನ್ನು ಕರೆ ತಂದಿದ್ದು ನ್ಯಾಯಾಧೀಶರ ಮುಂದೆ ಪೋಲಿಸರು ಹೇಳಿದಂತೆ ನನ್ನ ಹೇಳಿಕೆ ನೀಡಿರುತ್ತೇನೆ, ಯಾವ ಪೋಲಿಸರು ಎಂದು ನನಗೆ ಹೇಳಲಾಗುವುದಿಲ್ಲ, ನನ್ನ ಹೇಳಿಕೆಯಂತೆ ಯಾವುದೇ ವಿಚಾರ ನಡೆದಿರುವುದಿಲ್ಲ ಎಂದು ಪ್ರಾಸಾ-1 ರವರು ತಮ್ಮ ನುಡಿಯುತ್ತಾರೆ ಮತ್ತು ದಿನಾಂಕ 04-01-2023 ರಂದು ನಾನು ನ್ಯಾಯಾಲಯದ ಮುಂದೆ ಸಾಕ್ಷ್ಯವನ್ನು ಹೇಳಿರುತ್ತೇನೆ, ಸದರಿ ಸಾಕ್ಷ್ಯವನ್ನು ಪೋಲಿಸರು ಹೇಳಿದಂತೆ ಸಾಕ್ಷ್ಯವನ್ನು ನುಡಿದಿರುತ್ತೇನೆ, ಆ ರೀತಿ ಯಾವುದೇ ಘಟನೆಯಾಗಿರುವುದಿಲ್ಲ, ನನಗೆ ಹೇಳಿಕೊಟ್ಟಂತಹ ಪೋಲಿಸು ಯಾರು ಎಂದು ನನಗೆ ಗೊತ್ತಿಲ್ಲ ಮತ್ತು ಆರೋಪಿಯೂ ಯಾವುದೇ ತಪ್ಪು ಮಾಡಿರುವುದಿಲ್ಲ ಎಂದು ಪ್ರಾಸಾ-1 ರವರು ನುಡಿಯುತ್ತಾರೆ. ಆದ್ದರಿಂದ, ಅಭಿಯೋಜನೆಯು ಆರೋಪಿತರ ವಿರುದ್ಧ ಹೊರಿಸಿರುವಂತಹ

ದೋಷಾರೋಪಣೆಯನ್ನು ಸಂಶಯಾತೀತವಾಗಿ ಸಾಬೀತು ಪಡಿಸುವಲ್ಲಿ ವಿಫಲರಾಗಿರುತ್ತಾರೆ. **ಆದ್ದರಿಂದ, ಅಂಶ 1 ಮತ್ತು 2 ಅನ್ನು ನಕಾರಾತ್ಮಕ ಎಂದು ಉತ್ತರಿಸಿದ್ದೇನೆ.**

***10.*** **ಅಂಶ.3:** ಮೇಲ್ಕಂಡ ಚರ್ಚೆಯ ಫಲಶ್ರುತಿಯಿಂದ ಕೆಳಕಂಡ:

**ಆದೇಶ**

ದಂ.ಪ್ರ.ಸಂ. ವಿಧಿ 248(1)ರೀತ್ಯಾ ಪ್ರರ್ವತಿಸಿ ಭಾ.ದಂ.ಸಂ. ವಿಧಿ 354(ಬಿ) ಮತ್ತು 506ರ ರೀತ್ಯಾ ದಂಡನೀಯವಾದ ಅಪರಾಧಗಳ ಆರೋಪದಿಂದ ಆರೋಪಿಯನ್ನು ದೋಷಮುಕ್ತಗೊಳಿಸಿ ನಿರ್ದೋಷಿಗಳೆಂದು ನಿರ್ಣಯಿಸಿ ಅವರ ಬಿಡುಗಡೆಗೆ ಆದೇಶಿಸಲಾಯಿತು.

ಆರೋಪಿ ಹಾಗೂ ಅವರುಗಳ ಜಾಮೀನುದಾರರು ನೀಡಿರುವ ಜಾಮೀನು ಪತ್ರವನ್ನು ರದ್ದುಪಡಿಸಲಾಗಿದೆ.

(ನನ್ನಿಂದ ನೀಡಲಾದ ಉಕ್ತಲೇಖನವನ್ನು ಶೀಘ್ರಲಿಪಿಗಾರರು ನೇರವಾಗಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿದ್ದನ್ನು ಓದಿ, ತಿದ್ದಿ ನಂತರ ಮುಕ್ತ ನ್ಯಾಯಾಲಯದಲ್ಲಿ ಇಂದು ದಿನಾಂಕ 23 ನೇ ಜೂನ್ -2026 ಸರಂದು ಉದ್ಘೋಷಿಸಲಾಯಿತು.)

**(ದಾಸರಿ ಕ್ರಾಂತಿ ಕಿರಣ್)**
ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು
ದೊಡ್ಡಬಳ್ಳಾಪುರ.

## ಅನುಬಂಧ

1) **ಅಭಿಯೋಜನೆಯ ಪರ ವಿಚಾರಿಸಲಾದ ಸಾಕ್ಷಿಗಳ ಪಟ್ಟಿ:**

ಪ್ರಾಸಾ.1 : ಉಮಾದೇವಿ

2) **ಅಭಿಯೋಜನೆಯ ಪರ ಗುರುತಿಸಲಾದ ದಾಖಲೆಗಳ ಪಟ್ಟಿ:**

ನಿ.ಪಿ.1 : ದೂರು

ನಿ.ಪಿ.1(ಎ) : ಸಾಕ್ಷಿಯ ಸಹಿ

ನಿ.ಪಿ.2 : ಜಪ್ತಿಪಂಚನಾಮೆ

ನಿ.ಪಿ.2(ಎ) : ಸಾಕ್ಷಿಯ ಸಹಿ

ನಿ.ಪಿ.3 : 164 ಹೇಳಿಕೆ

3) **ಅಭಿಯೋಜನೆಯ ಪರ ಗುರುತಿಸಲಾದ ಮು.ಮಾ. ಪಟ್ಟಿ:**

----- ಇಲ್ಲ -----

4) **ಆರೋಪಿಗಳ ಪರ ವಿಚಾರಿಸಲಾದ ಸಾಕ್ಷಿಗಳ ಪಟ್ಟಿ :**

----- ಇಲ್ಲ -----

5) **ಆರೋಪಿಗಳ ಪರ ಗುರುತಿಸಲಾದ ದಾಖಲೆಗಳ ಪಟ್ಟಿ:**

----- ಇಲ್ಲ -----

6) **ಆರೋಪಿಗಳ ಪರ ಗುರುತಿಸಲಾದ ಮು.ಮಾ. ಪಟ್ಟಿ:**

ಮು.ಮಾ.1 : ಚಾಕು

Sd/-

**(ದಾಸರಿ ಕ್ರಾಂತಿ ಕಿರಣ್)**

ಪ್ರಧಾನ ಸಿವಿಲ್ ನ್ಯಾಯಾಧೀಶರು

ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು

ದೊಡ್ಡಬಳ್ಳಾಪುರ.